## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No.**375/2016

**DW**:1

**ದಿನಾಂಕ 10.06.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯರ ಪರ ಶ್ರೀ.ಎ.ಎ.ಜಿ. ವಕೀಲರಿಂದ:**

ನಿಂಗೊಂಡ ಇವರು ನನ್ನ ತಂದೆ ಎಂದರೆ ಸರಿ. ನಮ್ಮ ತಂದೆಗೆ ನಾವು ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಅವರೆಂದರೆ ಮಹಾದೇವಿ, ನಾನು ಹಾಗೂ ಗುರಣ್ಣ ಇರುತ್ತೇವೆ. 1999 ನೇ ಇಸವಿಯಲ್ಲಿ ನಾವು ವಾಟ್ನಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನಿ.ಪಿ.2 ರ ಪ್ರಕಾರ ನಾವು ವಾಟ್ನಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.2 ರ ಪ್ರಕಾರ ನಾವು ವಾಟ್ನಿ ಮಾಡಿಕೊಂಡಿದ್ದರು ಸಹ ಇಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಟ್ನಿ ಸಮಯದಲ್ಲಿ ನನ್ನ ಅಕ್ಕ ಮಹಾದೇವಿ ನಮ್ಮ ಊರಿನಲ್ಲಿ ಇದ್ದು ಅವರಿಗೆ ಮದುವೆಯಾಗಿರಲಿಲ್ಲ. ಸದರಿ ನನ್ನ ಅಕ್ಕ ಮಹಾದೇವಿ ಇವರು ಯಾವಾಗ ಮದುವೆಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಿಮ್ಮ ಹೆಸರಿನಲ್ಲಿ ವಾಟ್ನಿಯಾಗಿ ಬಂದಂತಹ ಆಸ್ತಿಗಳು ಈಗ ಯಾರ ಹೆಸರಿನಲ್ಲಿ ಇರುತ್ತವೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವು ಇನ್ನೂ ಏಕತ್ರ ಕುಟುಂಬದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಎಲ್ಲಾ ಆಸ್ತಿಗಳು ಏಕತ್ರ ಕುಟುಂಬದಲ್ಲಿ ಇರುತ್ತವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.194/1 ಬಿ/2 ವಿಸ್ತೀರ್ಣ 5 ಎಕರೆ, ಸರ್ವೆ ನಂ.290/1 ಸಿ ಮತ್ತು 211/2 ಇವು ನನ್ನ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಸದರಿ 3 ಆಸ್ತಿಗಳು ಹಿರಿಯರ ಆಸ್ತಿ ಎಂದರೆ ಸರಿ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರವನ್ನು ನಾನೇ ಬರೆಸಿರುತ್ತೇನೆ. ಸದರಿ ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿ ಬರೆಸಿರುವ ಎಲ್ಲಾ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯರು ನನಗೆ ಪರಿಚಯ ಇರುತ್ತಾರೆ ಎಂದು ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಬರೆಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಇಬ್ಬರು ವಾದಿಯರನ್ನು ಗುರುತಿಸಿರುತ್ತಾರೆ. ಸಾಲೋಟಗಿಯಲ್ಲಿ ವಾಟ್ನಿಯಲ್ಲಿ ನನ್ನ ಹೆಸರಿಗೆ ಬಂದ ಆಸ್ತಿಗಳ ನಂಬರ ಗೊತ್ತಿಲ್ಲ. 2 ನೇ ವಾದಿಯು ಸರ್ವೆ ನಂ.290/1 ಸಿ ಈ ಜಮೀನಿನಲ್ಲಿ

-2-

ಇರುತ್ತಾರೆ ಎಂದರೆ ಸಾಕ್ಷಿಯು ಇದ್ದಾರೆ ಎಂದು ಹೇಳುತ್ತಾರೆ ಆದರೆ ನಾನು ಹೋಗಿ ನೋಡಿಲ್ಲವೆಂದು ನುಡಿಯುತ್ತಾರೆ.

ದಿಃ15.07.2020 ರಂದು ನಾನು ವಾದಿಯರಿಗೆ ಹೊಡೆಬಡೆ ಮಾಡಿ ಹೊರಗೆ ಹಾಕಿದ್ದರಿಂದ ಅವರು ಮಹಿಳಾ ಸಂಘಕ್ಕೆ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಅವರೇ ನನಗೆ ಹೊಡೆಬಡೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅವರೇ ಎಂದರೆ ಯಾರು ಎಂದರೆ ಸಾಕ್ಷಿಯು ಮಗ ಮತ್ತು ಹೆಂಡತಿ ಎಂದು ನುಡಿಯುತ್ತಾರೆ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/–

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.